# ‘ಪುಷ್ಪ’ ಮೂರಕ್ಕೆ ಮುನ್ನುಡಿ

‘ಪುಷ್ಪ 3’ ಸಿನಿಮಾ ಬರುತ್ತದಾ? ನಿರ್ದೇಶಕ ಸುಕುಮಾರ್ ಅವರನ್ನು ಯಾರು ಹೀಗೆ ಕೇಳಿದರೂ, ನೋಡುತ್ತಾ ಇರಿ ಎಂಬಂಥ ನೋಟ ಬೀರುತ್ತಿದ್ದಾರೆ. ಆದರೆ, ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಮುಂದಿನ ಭಾಗ ಬರುವುದು ಖರೆ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಸುಕುಮಾರ್ ಸ್ಕ್ರಿಪ್ಟ್ ಅನ್ನು ವಿಪರೀತ ಎನ್ನುವಷ್ಟು ತಿದ್ದುತ್ತಾರೆ. ವರ್ಷಗಳು ಉರುಳಿದರೂ ಅವರ ಸಿನಿಮಾ ದೃಶ್ಯಗಳು ತಾಜಾ ಎನ್ನಿಸುವುದು ಆ ತಿದ್ದುವಿಕೆಯ ಪ್ರಕ್ರಿಯೆ ಕಾರಣಕ್ಕೆ. ಈಗಲೂ ಸುಕುಮಾರ್ ‘ಪುಷ್ಪ’ ಕಥೆಯನ್ನು ವಿಸ್ತರಿಸಲು ಕುಳಿತುಕೊಂಡಿದ್ದಾರೆ. ಮೊದಲ ಭಾಗದ ಸಿನಿಮಾ ಯಶಸ್ವಿಯಾದ ನಂತರ ದೊಡ್ಡ ಭಾರ ನಿರ್ದೇಶಕನ ಮೇಲಿರುತ್ತದೆ. ಅದನ್ನು ಬಹಳ ಅಚ್ಚುಕಟ್ಟಾಗಿ ಸುಕುಮಾರ್ ನಿಭಾಯಿಸಿದರು. ಹಾಗಾಗಿಯೇ ಎರಡನೇ ಭಾಗ ಯಶಸ್ವಿಯಾಯಿತು ಎಂದು ದೇವಿಶ್ರೀ ಪ್ರಸಾದ್ ಹೊಗಳಿದ್ದಾರೆ.

ಮೂರನೇ ಭಾಗದ ಕಥಾವಿಸ್ತರಣೆ ಹೇಗಿರುತ್ತದೆ ಎನ್ನುವುದು ಮಾತ್ರ ಗುಟ್ಟಾಗಿಯೇ ಇರುತ್ತದೆ ಎನ್ನುವ ದೇವಿಶ್ರೀ, ಎರಡನೇ ಭಾಗದ ದೊಡ್ಡ ಯಶಸ್ಸು ಇನ್ನಷ್ಟು ಉತ್ಸಾಹ ಮೂಡಿಸಿದೆ ಎನ್ನುತ್ತಾರೆ.

‘ಪುಷ್ಪ 2’ ಸಿನಿಮಾ ಒಂದು ಸಾವಿರ ಕೋಟಿ ರೂಪಾಯಿ ಗಳಿಕೆಯ ಮೈಲಿಗಲ್ಲು ದಾಟಿ ನುಗ್ಗುತ್ತಿದೆ. ಕಾಲ್ತುಳಿತದಿಂದ ಮಹಿಳೆಯೊಬ್ಬರು ಮೃತಪಟ್ಟ ಪ್ರಕರಣದಲ್ಲಿ ನಾಯಕ ಅಲ್ಲು ಅರ್ಜುನ್ ಆರೋಪಿಯಾಗಿ, ಬಂಧನಕ್ಕೆ ಒಳಗಾಗಿ, ಜಾಮೀನಿನ ಮೇಲೆ ಬಿಡುಗಡೆಯೂ ಆದರು. ಇಷ್ಟೆಲ್ಲ ಬದಲಾವಣೆ ಆದ ನಂತರವೂ ಸಿನಿಮಾ ಗಳಿಕೆ ಕಳೆಗುಂದಲಿಲ್ಲ.





# ಕಷ್ಟದ ಗೇಮ್

‘ಗೇಮ್ ಚೇಂಜರ್’ ಸಿನಿಮಾ ಕೆಲವೇ ದಿನಗಳಲ್ಲಿ ನೂರು ಕೋಟಿ ರೂಪಾಯಿ ಹಣ ಮಾಡಿದರೂ ನಿರ್ದೇಶಕ ಶಂಕರ್ ಕಣ್ಣಲ್ಲಿ ತೃಪ್ತಿಯ ಹೊಳಪು ಕಾಣುತ್ತಿಲ್ಲ. ನಿರ್ಮಾಪಕ ದಿಲ್ ರಾಜು ಕಣ್ಣಲ್ಲಿಯೂ ಬೇಸರದ ಹನಿಗಳು. ಕಾರ್ತೀಕ್ ಸುಬ್ಬರಾಜ್ ತಾವು ನಿರ್ದೇಶಿಸಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕೆ ಕೊಟ್ಟ ಕಥೆಯನ್ನು ವಿಸ್ತರಿಸಿಕೊಂಡು ಶಂಕರ್, ‘ಗೇಮ್ ಚೇಂಜರ್’ ಸಿನಿಮಾ ಮಾಡಿದ್ದು.

ಮೊದಲ ಎಡಿಟಿಂಗ್ ಆದಮೇಲೆ ಅವರು ತಮಗೆ ಇಷ್ಟವಾದ ದೃಶ್ಯಗಳನ್ನೆಲ್ಲ ಒಗ್ಗೂಡಿಸಿಕೊಂಡು ನೋಡಿದರು. ಕನಿಷ್ಠ ಐದು ತಾಸು ಅವಧಿಯ ದೃಶ್ಯಗಳು ಇದ್ದವು. ಇಷ್ಟು ದೀರ್ಘಾವಧಿ ಸಿನಿಮಾ ಉಳಿಸಿಕೊಳ್ಳಲು ಆಗದ ಅಸಹಾಯಕತೆ ಅವರನ್ನು ಮೊದಮೊದಲು ಕಾಡಿತ್ತಂತೆ.

ಅವಧಿಗೆ ತಕ್ಕಂತೆ ಇನ್ನಷ್ಟು ದೃಶ್ಯಗಳನ್ನು ಕತ್ತರಿಸದೇ ವಿಧಿ ಇರಲಿಲ್ಲ. ಹೀಗಾಗಿ ಶಂಕರ್ ಅವರಿಗೆ ಇನ್ನಷ್ಟು ಎಡಿಟ್ ಮಾಡುವುದು ಅನಿವಾರ್ಯ ಆಯಿತು.

ನಿರ್ಮಾಪಕ ದಿಲ್ ರಾಜು ಅವರ ವೃತ್ತಿಪರತೆ ಹಾಗೂ ಲೆಕ್ಕಾಚಾರದ ಬಗೆಗೆ ಅನೇಕರು ಹೊಗಳಿಕೆಯ ಮಾತಾಡುತ್ತಾರೆ. ಸಾಮಾನ್ಯವಾಗಿ ಅವರು ಲುಕ್ಸಾನು ಆಗದಂತೆ ನಿಗಾ ವಹಿಸಿಯೇ ಸಿನಿಮಾಗಳ ಮೇಲೆ ಬಂಡವಾಳ ಹೂಡುತ್ತಾರೆ. ಆದರೆ, ‘ಗೇಮ್ ಚೇಂಜರ್’ ವಿಷಯದಲ್ಲಿ ಅವರು ಅಂದುಕೊಂಡಂತೆ ಯಾವುದೂ ಆಗಲಿಲ್ಲ.

ಮೊದಲಿಗೆ ನಿಗದಿತ ದಿನಾಂಕದೊಳಗೆ ಚಿತ್ರೀಕರಣ ಮುಗಿಯಲಿಲ್ಲ. ನಡುವೆ ‘ಇಂಡಿಯನ್ 2’ ಸಿನಿಮಾ ಕೆಲಸಗಳಲ್ಲಿ ಶಂಕರ್ ತೊಡಗಿಕೊಂಡು, ಈ ಚಿತ್ರದ ಕಾರ್ಯಕ್ಕೆ ಮರಳಿದರು.

ವಿಳಂಬವಾದಂತೆಲ್ಲ ಚಿತ್ರದ ಬಜೆಟ್ ಕೂಡ ಬೆಳೆಯುತ್ತಾ ಹೋಯಿತು. ಅಂತಿಮವಾಗಿ ಐದು ತಾಸು ಅವಧಿಯಷ್ಟು ದೃಶ್ಯಗಳನ್ನು ಶಂಕರ್ ಗುಡ್ಡೆ ಹಾಕಿಕೊಂಡು ಕುಳಿತದ್ದು ಕೂಡ ವೈಯಕ್ತಿಕವಾಗಿ ದಿಲ್ ರಾಜು ಅವರಿಗೆ ಇಷ್ಟವೇನೂ ಇರಲಿಲ್ಲ. ಆದರೆ, ಸಿನಿಮಾ ಮಾರುಕಟ್ಟೆ ಮೇಲೆ ವ್ಯತಿರಿಕ್ತ ಪರಿಣಾಮ ಆದೀತು ಎಂದುಕೊಂಡು ಸುಮ್ಮನಾದರು.

‘ಇಂಡಿಯನ್ 2’ ಚಿತ್ರವು ಗಲ್ಲಾಪೆಟ್ಟಿಗೆಯಲ್ಲಿ ಸೋತ ನಂತರ ಶಂಕರ್ ಫಾರ್ಮ್ ಕುರಿತು ಪ್ರಶ್ನೆಗಳು ಎದ್ದವು. ‘ಗೇಮ್ ಚೇಂಜರ್’ ನಿರೀಕ್ಷಿತ ಮಟ್ಟಕ್ಕೆ ಪ್ರೇಕ್ಷಕರನ್ನು ಸೆಳೆಯದೆ ಹೋದಾಗಲೂ ವದಂತಿಗಳಿಗೆ ಕಿವಿಗೊಡಬೇಡಿ ಎಂದು ದಿಲ್ ರಾಜು ವಿನಂತಿಸಿಕೊಂಡರು. ನಾಯಕ ರಾಮ್ ಚರಣ್ ಸಿನಿಮಾ ಗೆಲ್ಲಿಸಿದ್ದಕ್ಕೆ ಧನ್ಯವಾದ ಸಲ್ಲಿಸಿ ಪ್ರೇಕ್ಷಕರಿಗೆ ಪತ್ರ ಬರೆದು, ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದರು.

ಈ ಯಾವ ಕಸರತ್ತುಗಳು ಕೂಡ ಸಿನಿಮಾ ಮೇಲೆತ್ತಲು ಸಾಧ್ಯವಾಗಿಲ್ಲ. ‘ಗೇಮ್ ಚೇಂಜರ್’ ಅಥವಾ ಗೇಮ್ ಓವರ್ ಎಂದು ಜನರು ಗೇಲಿ ಮಾಡುತ್ತಿರುವುದನ್ನು ಕಂಡು ದಿಲ್ ರಾಜು ನೊಂದುಕೊಳ್ಳದೆ ಈಗ ವಿಧಿಯಿಲ್ಲ.